33	ಗಾಳಿಬೀಡು ಬಾರಿ ಬೆಳ್ಳಚ್ಚು ಬಾರಿಕೆ ಮೊಟ್ಟೆ ರಸ್ತೆ ದುರಸ್ಥಿ	1.50
34	ಭಾಗಮಂಡಲ ತಣ್ಣೀಮಾನಿ ಭಗವತಿ ದೇವಸ್ಥಾನ ರಸ್ತೆ ದುರಸ್ಥಿ	0.40
35	ಮೇಘತ್ತಾಳು ಮೋರಿ ನಿರ್ಮಾಣ	1.00
36	ಬಿಳಿಗೇರಿ ಕಗ್ಗೋಡ್ಲು ಹುಲಿತಾಳ ಲಿಂಕ್ ಮರಗೋಡು ರಸ್ತೆ ದುರಸ್ಥಿ	1.00
37	ಕೋಣಂಜಗೇರಿ ಪಂ. ಬಲಮುರಿ ರಸ್ತೆ ಕಟ್ಟಡದ ಮನೆಗಾರಿ ಹೋಗುವ ರಸ್ತೆ ಅಭಿವೃದ್ಧಿ	1.00
38	ಹಾಕತ್ತೂರು ಪಂ.ಬಿಳಿಗೇರಿ ಗ್ರಾಮದ ಕಾಳೆಕೋಟಿ ಮನೆಗಾಗಿ ಹಾದು ಹೋಗುವ ರಸ್ತೆ ದುರಸ್ಥಿ	1.00
39	ನರಿಯಂದಡ ಪಂ.ಎಡಪಾಲು ಕರಡ ಪಾಂಡಂಡ ಮನೆಗಾಗಿ ಹೋಗುವ ರಸ್ತೆ ದುರಸ್ಥಿ	1.00
40	ಮಕ್ಕಂದೂರು ಸಿಂಕೋನ ರಸ್ತೆ ದುರಸ್ಥಿ	1.00
41	ಅಯ್ಯಂಗೇರಿ ಸಣ್ಣಪುಲಿಕೋಟು ತಣ್ಣಿಮಾನಿ ಭಾಗಮಂಡಲ ರಸ್ತೆ ದುರಸ್ಥಿ	1.50
42	ಕಡಂಗ ಬೊಳ್ಳುಮಾಡು ನಾಪೋಕ್ಲು ರಸ್ತೆ ದುರಸ್ಥಿ	1.00
43	ಹೊದ್ದೂರು ವಾಟೆಕಾಡು ಬಲಮುರಿ ರಸ್ತೆ ದುರಸ್ಥಿ	1.00
44	ಗಾಳಿಬೀಡು ಪಂ.ಕರಡ ಕಾಲೋನಿ ರಸ್ತೆ ದುರಸ್ಥಿ	0.40
45	ನಾಪೋಕ್ಲು ಸೀನಿಯರ್ ಕಾಲೇಜು ರಸ್ತೆ ದುರಸ್ಥಿ	0.20
	ಒಟ್ಟು	**51.83**

3696(4718); ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ); ಮಾನ್ಯ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಕೊರೆಸಲಾಗಿರುವ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು; ಈ ಪೈಕಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಕೆಟ್ಟು ಹೋಗಿರುವ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು; (ಗ್ರಾಮವಾರು ಮಾಹಿತಿ ನೀಡುವುದು);

ಆ) ಕೇಟ್ಟು ಹೋದ ಬೋರ್‌ವೆಲ್‌ಗಳನ್ನು ದುರಸ್ಥಿ ಮಾಡಲಾಗಿದೆಯೇ; ದುರಸ್ಥಿಗಾಗಿ ಖರ್ಚು ಮಾಡಿರುವ ಹಣ ಎಷ್ಟು; (ವಿವರ ನೀಡುವುದು);

ಇ) 2004–05ರ ಸಾಲಿನಲ್ಲಿ ಮಡಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಹೊಸದಾಗಿ ಕೊರೆಯಲಾಗಿದೆ; (ಪಂಚಾಯತ್ ವಿವರ ನೀಡುವುದು);

ಈ) 2004–05 ಹಾಗೂ 2005–06ನೇ ಸಾಲಿನಲ್ಲಿ ಮಡಿಕೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ತೆರೆದ ಬಾವಿ ನಿರ್ಮಿಸಲಾಗಿದೆ; (ಪಂಚಾಯತ್‌ವಾರು ಮಾಹಿತಿ ನೀಡುವುದು)?

a) How many borewells have been drilled in Madikere Assembly Constituency; How many are working and how many are under repairs; (Villagewise details be furnished);

b) Whether such borewells are repaired; what is the amount spent for repairs (Details be furnished);

c) How many fresh borewells are drilled during 2004-05 in Madikere Assembly Constituency Give panchayatwise details;

d) How many open are dug during 2004-05 & 2005-06 in Madikere Assembly constitunency (Furnish Panchayatwise details)?

ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು)

ಅ) ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 817 ಕೊಳವೆ ಬಾವಿಗಳನ್ನು ಕೊರೆಸಲಾಗಿದ್ದು, 796 ಕೊಳವೆ ಬಾವಿಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ 21 ಕೊಳವೆ ಬಾವಿಗಳು ಕೆಟ್ಟು ಹೋಗಿರುತ್ತವೆ. (ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.)

ಆ) ದುರಸ್ಥಿ ಮಾಡಲಾಗಿದೆ. ದುರಸ್ಥಿಗಾಗಿ ಒಟ್ಟು ರೂ.2,32,880.00 ಗಳನ್ನು ಖರ್ಚು ಮಾಡಲಾಗಿದೆ.

ಇ) 2004–05ನೇ ಸಾಲಿನಲ್ಲಿ ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಂದು ಕೊಳವೆ ಬಾವಿಯನ್ನು ಕಲ್‌ಕೇರಿ ನಿಡುಗಣಿ ಗ್ರಾಮ ಪಂಚಾಯತ್‌ನಲ್ಲಿ ಹೊಸದಾಗಿ ಕೊರೆಯಲಾಗಿದೆ.

ಈ) 2004–05ನೇ ಸಾಲಿನಲ್ಲಿ ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 33 ತೆರೆದ ಬಾವಿಗಳನ್ನು ನಿರ್ಮಿಸಲಾಗಿದೆ. 2005–06ನೇ

ಸಾಲಿನಲ್ಲಿ ಯಾವುದೇ ತೆರೆದ ಬಾವಿಯನ್ನು ನಿರ್ಮಿಸಿರುವುದಿಲ್ಲ. (ಪಂಚಾಯತ್‌ವಾರು ವಿವರವನ್ನು ಅನುಬಂಧ–1ರಲ್ಲಿ ನೀಡಿದೆ.)

a) 817 Borewells were drilled in Madikere Assembly Constituency out of which 796 Borewells are working and 21 Borewells are under repairs. (Details as in Annexure-1)

b) Repaired Rs.2,32,880.00 is spent for repair.

c) Only one fresh Borewell in Kalkere Nidugani Gram Panchayat has been drilled during 2004-05 in Madikere Assembly Constituency.

d) 33 Open Wells were dug during 2004-05 in Madikere Assembly Constitunency during 2005-06, no Open Well is dug. (Panchayatwise details are as in Annexure-1)

3698(4720); ಶ್ರೀ ಬೋಪಯ್ಯ ಕೆ.ಬಿ. (ಮಡಿಕೇರಿ); ಶ್ರೀ ಅಂಜನಮೂರ್ತಿ (ವಸತಿ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಮಡಿಕೇರಿ ವಿಧಾನಸಭೆ ಕ್ಷೇತ್ರದಲ್ಲಿ 1999 ರಿಂದ 2004ರವರೆಗೆ ಎಷ್ಟು ನವಗ್ರಾಮ ಯೋಜನೆಗಳನ್ನು ಪ್ರಾರಂಭಿಸಲಾಗಿದೆ;

ಆ) ಪೂರ್ಣಗೊಂಡಿರುವ ಯೋಜನೆಗಳು ಎಷ್ಟು; (ವಿವರ ನೀಡುವುದು);

ಇ) ನಿರ್ಮಾಣಗೊಂಡ ಮನೆಗಳಲ್ಲಿ ಜನರು ವಾಸಿಸುತ್ತಿದ್ದಾರೆಯೇ; (ವಿವರ ನೀಡುವುದು);

ಈ) ಇದಕ್ಕಾಗಿ ಮಂಜೂರಾಗಿರುವ ಹಾಗೂ ಇದುವರೆವಿಗೂ ವೆಚ್ಚವಾಗಿರುವ ಹಣ ಎಷ್ಟು?

ಶ್ರೀ ಅಂಜನಮೂರ್ತಿ (ವಸತಿ ಸಚಿವರು)

ಅ,ಆ,ಇ) ನವಗ್ರಾಮ – ಆಶ್ರಯ ಯೋಜನೆಯು 2001–02ನೇ ಶ್ರೇಣಿಯಿಂದ ಜಾರಿಗೆ ಬಂದಿದ್ದು, ಅಲ್ಲಿಂದ ಈವರೆಗೆ ಸರ್ಕಾರವು ಮಡಿಕೇರಿ ವಿಧಾನಸಭೆ ಕ್ಷೇತ್ರಕ್ಕೆ ನೀಡಿದ ಗುರಿ ಮತ್ತು ಪೂರ್ಣಗೊಂಡ ಮನೆಗಳ ವಿವರಗಳನ್ನು ಅನುಬಂಧ–"ಅ" ನಲ್ಲಿ ನೀಡಲಾಗಿದೆ.

ಈ) ಮೇ 31, 2005ರಲ್ಲಿ ಮಂಜೂರಾಗಿರುವ ಹಾಗೂ ಇದುವರೆವಿಗೂ ವೆಚ್ಚವಾಗಿರುವ ಹಣವನ್ನು ಅನುಬಂಧ "ಆ" ನಲ್ಲಿ ನೀಡಲಾಗಿದೆ.